ಶ್ರೀ ಬಿ.ಬಿ.ಶಿವಪ್ಪ (ಸಕಲೇಶಪುರ): ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೆಚ್ಚುವರಿ ಎಸ್.ಪಿ.ಹುದ್ದೆಗಳನ್ನು ಯಾವಾಗಿನಿಂದ ಸೃಷ್ಟಿಸಲಾಯ್ತು?

ಆ) ಈ ಹುದ್ದೆಯಲ್ಲಿ ಈಗ ಎಷ್ಟು ಜನ ಇದ್ದಾರೇ?

ಇ) ಅವರಿಗೆ ವಹಿಸಲಾಗಿರುವ ಜವಾಬ್ದಾರಿಗಳೇನು?

ಈ) ಯಾವ ಯಾವ ಜಿಲ್ಲೆಗಳಲ್ಲಿ ಇವರು ಕಾರ್ಯ ನಿರ್ವಹಿಸುತ್ತಿರುವರು?

ಶ್ರೀ ಪಿ.ಜಿ.ಆರ್.ಸಿಂಧ್ಯಾ (ಗೃಹ ಸಚಿವರು):

ಸೃಷ್ಟಿಸಿದ ದಿನಾಂಕ	ಹುದ್ದೆಗಳು
1. 31-1-76	01
2. 1-8-86	01
3. 3-2-92	13
4. 27-3-92	04

ಆ) ಒಟ್ಟು 19 ಜನ ಅಧಿಕಾರಿಗಳಿದ್ದಾರೆ.

ಇ) ಜಿಲ್ಲಾ ಹೆಚ್ಚುವರಿ ಪೋಲೀಸ್ ಅಧೀಕ್ಷಕರು ಜಿಲ್ಲಾ ವರಿಷ್ಠಾಧಿಕಾರಿಗಳಿಗೆ ಮುಖ್ಯವಾಗಿ ಅಪರಾಧ ವಿಭಾಗದಲ್ಲಿ ನೆರವು ನೀಡುವುದು.

ಈ) ರಾಜ್ಯದ ಎಲ್ಲ 19 ಜಿಲ್ಲೆಗಳಲ್ಲಿ (ಕೆ.ಜಿ.ಎಫ್ ಅನ್ನು ಹೊರತುಪಡಿಸಿ).

ವಿಷಯ: ಜಾಗೃತ ದಳದ ಕಾರ್ಯ ನಿರ್ವಹಣೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1639 (1799)

ಶ್ರೀ ಎ.ಟಿ. ರಾಮಸ್ವಾಮಿ (ಅರಕಲಗೂಡು): ಮಾನ್ಯ ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಹಾಗೂ ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿ.ಡಿ.ಎ.ನಲ್ಲಿರುವ ಜಾಗೃತ ದಳವು ಅಕ್ರಮವಾಗಿ ನಿರ್ಮಾಣ ತಡೆಯುವಲ್ಲಿ ವಿಫಲಗೊಂಡಿರುವುದು ನಿಜವೇ?

ಆ) ಬೆಂಗಳೂರಿನಲ್ಲಿ ಸುಮಾರು ಎಷ್ಟು ಅಕ್ರಮ ಮನೆಗಳು ನಿರ್ಮಾಣಗೊಂಡಿರುತ್ತವೆ?

ಶ್ರೀ ಆರ್. ರೋಷನ್ ಬೇಗ್ (ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಹಾಗೂ ವಕ್ಫ್ ರಾಜ್ಯ ಸಚಿವರು) :-

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಸ್ವಾಧೀನ ಪಡೆದಿರುವ ಜಮೀನುಗಳಲ್ಲಿ ಬರುವ ಅನಧಿಕೃತ ಕಟ್ಟಡಗಳನ್ನು ತಡೆಯುವುದು ಮತ್ತು ನೆಲಸಮ ಮಾಡುವ ಉದ್ದೇಶದಿಂದ 1992ನೇ ಇಸವಿಯಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ವಿಶೇಷ ಕಾರ್ಯನಿರತ ಪಡೆ ಮತ್ತು ಜಾಗೃತಿ ದಳವನ್ನು ಸೃಷ್ಟಿಸಲಾಗಿದೆ. ವಿಶೇಷ ಕಾರ್ಯನಿರತ ಪಡೆ ಮತ್ತು ಜಾಗೃತಿ ದಳವನ್ನು ಸೃಷ್ಟಿಸಿದಾಗಿನಿಂದ ಅನೇಕ ಅನಧಿಕೃತ ಕಟ್ಟಡಗಳನ್ನು ನೆಲಸಮ ಮಾಡಲಾಗಿದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿರುವ ನಿವೇಶನಗಳು ಮತ್ತು ಜಮೀನುಗಳ ಮೇಲೆ ನ್ಯಾಯಾಲಯಗಳಲ್ಲಿ ಅನೇಕ ಪ್ರಕರಣಗಳು ದಾವಿಲಾಗಿರುವುದು ಹಾಗೂ ತಡೆಯಾಜ್ಞೆಗಳು ಬಂದಿರುವುದು ವಿಶೇಷ ಕಾರ್ಯನಿರತ